ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ,ತರೀಕೆರೆ

ಸಿ.ಸಿ.ನಂಃ 652/2024

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

ಃವಿರುದ್ಧ ಃ

ಆರೋಪಿಃ 1. ಶ್ರೀ ಶಿವಕುಮಾರ,
ಬಿನ್ ಶ್ರೀ ದೊಡ್ಡಯ್ಯ,
50 ವರ್ಷ,
ವಾಸಃ ದಾವಣಗೆರೆ ನಗರ,
ದಾವಣಗೆರೆ.
3. ಶ್ರೀಮತಿ ಗೀತಾ,
ಕೋಂ ಶ್ರೀ ಶಿವಕುಮಾರ,
38 ವರ್ಷ,
ವಾಸಃ ದಾವಣಗೆರೆ ನಗರ,
ದಾವಣಗೆರೆ.
4. ಶ್ರೀಮತಿ ರುದ್ರಮ್ಮ,
ಕೋಂ ಶ್ರೀ ದೊಡ್ಡಯ್ಯ,
65 ವರ್ಷ,
ವಾಸಃ ದಾವಣಗೆರೆ ನಗರ,
ದಾವಣಗೆರೆ.
5. ಶ್ರೀಮತಿ ಗಂಗಮ್ಮ,
ಕೋಂ ಶ್ರೀ ಮಲ್ಲೇಶಪ್ಪ,
65 ವರ್ಷ,
ವಾಸಃ ಕಾಟಿಗನೆರೆ ಗ್ರಾಮ,
ಅಜ್ಜಂಪುರ ತಾಲ್ಲೂಕು.
6. ಶ್ರೀ ಮಲ್ಲೇಶಪ್ಪ,
ಬಿನ್ ಶ್ರೀ ಸಿದ್ದರಾಮಪ್ಪ,
65 ವರ್ಷ,

ವಾಸಃ ಕಾಟಿಗನೆರೆ ಗ್ರಾಮ,
ಅಜ್ಜಂಪುರ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 27.12.2023 ರಂದು ಬೆಳಿಗ್ಗೆ 11.30 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಕಾಟಿಗನೆರೆ ಗ್ರಾಮದಲ್ಲಿ ಚಾಸಾ-1/ ಶ್ರೀಮತಿ ಶೋಭಾ ಮತ್ತು ಚಾಸಾ-4/ ಶ್ರೀ ಅಶೋಕ ರವರು ತಮ್ಮ ಮಗನನ್ನು ಶಾಲೆಗೆ ಕಳುಹಿಸಲು ಅಜ್ಜಂಪುರಕ್ಕೆ ಹೋಗಿದ್ದ ಸಮಯದಲ್ಲಿ ಆಸ್ತಿಯ ವಿಚಾರದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಅವರ ಮನೆಗೆ ಗುಂಪು ಕಟ್ಟಿಕೊಂಡು ಬಂದು ದೊಂಬಿ ನಡೆಸಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ದೊಂಬಿ ಮಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ಕೈಯಲ್ಲಿ ಮಾರಕ ಆಯುಧಗಳನ್ನು ಹೊಂದಿ ದೊಂಬಿ ಮಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಚಾಸಾ-5/ ಶ್ರೀ ಸಮರ್ಥ ಮತ್ತು ಚಾಸಾ-6/ ಶ್ರೀ ದೇವರಾಜ್ ರವರು ಕರೆ ಮಾಡಿ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಗಲಾಟೆ ಮಾಡುತ್ತಿರುವ ವಿಚಾರವನ್ನು ತಿಳಿಸಿದಾಗ, ಚಾಸಾ-1

ಮತ್ತು 4 ರವರು ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಮನೆಗೆ ಬಂದಾಗ ಆರೋಪಿತರಾದ ನೀವುಗಳು ಮನೆಯನ್ನು ಬಿಟ್ಟುಕೊಡು ಎಂದು ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, 1, 3 ರಿಂದ 6 ನೇ ಆರೋಪಿತರಾದ ನೀವು ಚಾಸಾ–1 ರವರಿಗೆ ಸೂಳೆಮುಂಡೆ, ಹಲ್ಲಾಮುಂಡೆ, ಬೇವರ್ಸಿ ಮುಂಡೆ ಇದು ನಮ್ಮ ಮನೆ ನೀನ್ಯಾಕೆ ಬಂದಿದ್ದೀರಿ ಎಂದು ಚಾಸಾ–1 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಆರನೇಯಾದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 3 ಮತ್ತು 4 ನೇ ಆರೋಪಿ ಚಾಸಾ–1 ರವರ ಕೈಯನ್ನು ಹಿಡಿದು ತಿರುಚಿದಾಗ ಚಾಸಾ–1 ರವರು ನೆಲಕ್ಕೆ ಬಿದ್ದಿರುತ್ತಾರೆ, ಆಗ ನಿಮ್ಮಲ್ಲಿ 3 ರಿಂದ 5 ನೇ ಆರೋಪಿ ಕಾಲಿನಿಂದ ತುಳಿದಿರುತ್ತಾರೆ, ನಿಮ್ಮಲ್ಲಿ 6 ನೇ ಆರೋಪಿ ಚಾಸಾ–4 ರವರನ್ನು ನೆಲಕ್ಕೆ ಕೆಡವಿ ಕಾಲಿನಿಂದ ತುಳಿದಿರುತ್ತಾರೆ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಏಳನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 1 ನೇ ಆರೋಪಿ ಚಾಸಾ–1 ರವರ ತಲೆಕೂದಲನ್ನು ಹಿಡಿದುಕೊಂಡು ಗೋಡೆಗೆ ಡಿಕ್ಕಿ ಹೊಡೆಸಿ ಅವರ ತಲೆಗೆ ಮತ್ತು ಕಿವಿಗೆ ಪೆಟ್ಟು ಮಾಡಿರುತ್ತೀರಿ ಮತ್ತು ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 325 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎಂಟನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 1 ನೇ ಆರೋಪಿ ಚಾಸಾ–1 ರವರ ತಲೆಕೂದಲನ್ನು ಹಿಡಿದುಕೊಂಡು ಮಾನಕ್ಕೆ ಭಂಗ ಬರುವಂತೆ ಎಳೆದಾಡಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1, 3 ರಿಂದ 6 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಆರೋಪಿಗಳಾದ ನೀವು ಚಾಸಾ–1 ಮತ್ತು 4 ರವರಿಗೆ ನೀವು ಮನೆಯನ್ನು ಖಾಲಿ ಮಾಡದೆ ಹೋದರೆ ನಿಮ್ಮ ಮಕ್ಕಳು ಮತ್ತು ನಿಮ್ಮನ್ನು ಊರಿನಲ್ಲಿ ಹೊಡೆದು ಬಿಸಾಕುತ್ತೇವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1, 3 ರಿಂದ 6 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1, 3 ರಿಂದ 6 ನೇ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಶ್ನೆಃ 1 : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಉತ್ತರಃ : ಆರೋಪಿಃ1. Yes
ಆರೋಪಿಃ3. Yes
ಆರೋಪಿಃ4. Yes
ಆರೋಪಿಃ5. Yes
ಆರೋಪಿಃ6. Yes

ಪ್ರಶ್ನೆಃ 2 : ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ : ಆರೋಪಿಃ1. Pleaded not guilty and claimed to be tried
ಆರೋಪಿಃ3. Pleaded not guilty and claimed to be tried
ಆರೋಪಿಃ4. Pleaded not guilty and claimed to be tried
ಆರೋಪಿಃ5. Pleaded not guilty and claimed to be tried
ಆರೋಪಿಃ6. Pleaded not guilty and claimed to be tried

(ಆರೋಪಿಗಳಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕಃ 07.02.2025.

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕರೆ

ಆರೋಪಿಗಳ ಸಹಿಃ

ಆರೋಪಿ ಸಂಃ 1. ........................................

ಆರೋಪಿ ಸಂಃ 3........................................

ಆರೋಪಿ ಸಂಃ 4........................................

ಆರೋಪಿ ಸಂಃ 5........................................

ಆರೋಪಿ ಸಂಃ 6........................................